CW-05
PW-04

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.</u>**

ಸ್ಪೇಷಲ್ .ಕೇಸ್(ಎಸ್.ಸಿ.ಎಸ್.ಟಿ.) ಸಂಖ್ಯೆ 04/2022

ದಿ. 18-09-2025

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-05
ಫ್ರಾಸಾ-04

| | |
|---|---|
| ಸಾಕ್ಷಿದಾರರ ಹೆಸರು | ಹುಲಗೇಶ್ |
| ತಂದೆಯ ಹೆಸರು | ಬಸವರಾಜ |
| ವಯಸ್ಸು | 23 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಾಚನೂರು |

**<u>ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-</u>**

1. ನನಗೆ ಚಾಸಾ-1 ರಿಂದ 3 ಗೊತ್ತು.

2. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತನು ಸಹ ನನಗೆ ಗೊತ್ತು.

3. ಈಗ ಸುಮಾರು 4 ವರ್ಷಗಳ ಹಿಂದೆ ಒಂದು ದಿನ ರಾತ್ರಿ ಸುಮಾರು 08 ಗಂಟೆಯ ಸಮಯದಲ್ಲಿ ಆರೋಪಿತನ ಮನೆಯ ಹತ್ತಿರ ರಸ್ತೆಯ ಮೇಲೆ ಚಾಸಾ-2 ಮತ್ತು ಆರೋಪಿತನ ನಡುವೆ ಗಲಾಟೆ ನಡೆದಿತ್ತು.

4. ಆ ಸಮಯದಲ್ಲಿ ನಾನು ಮತ್ತು ಚಾಸಾ-4 ಜಗಳವನ್ನು ಬಿಡಿಸಿಕೊಂಡಿರುತ್ತೇವೆ.

CW-05
PW-04

5. ಇಷ್ಟನ್ನು ಹೊರತುಪಡಿಸಿ ಈ ಪ್ರಕರಣದಲ್ಲಿ ಬೇರೇನೂ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ**

6. ಸದರಿ ಜಗಳದ ಸಮಯದಲ್ಲಿ ಆರೋಪಿತನು ಚಾಸಾ-2 ಈತನಿಗೆ ಬೇಡರ ಸೂಳೆ ಮಕ್ಕಳೆಂದು ಬೈದಿರುತ್ತಾರೆ ಎಂಬುದು ಸರಿ.

7. ಅದು ಅಲ್ಲದೇ ಆರೋತಪಿನು ಚಾಸಾ-2 ಈತನಿಗೆ ತನ್ನ ಕೈಗಳಿಂದ ಹೊಡೆದು ಈಗ ತೋರಿಸುತ್ತಿರುವ ಮು.ಮಾ.1 ರಂತಿರುವ ಚಾಸಾ-2 ಈತನ ಅಂಗಿಯನ್ನು ಹರಿದಿರುತ್ತಾನೆ ಎಂಬುದು ಸರಿ.

8. ಚಾಸಾ-1 ಇವಳು ಹೊಲದಿಂದ ಮರಳಿ ಬರುತ್ತಿದಾಗ ಸಾಯಂಕಾಲ ಆರೋಪಿತನು ಅವಳಿಗೆ ತನ್ನ ಮೊಬೈಲ್ ನಂಬರನ್ನು ಕೊಡಲು ಪ್ರಯತ್ನಿಸಿ ಕೈ ಹಿಡಿದು ಎಳೆದಿರುವ ವಿಚಾರವಾಗಿರಿ ಚಾಸಾ-2 ಈತನು ಆರೋಪಿತನಿಗೆ ವಿಚಾರಿಸಲೆಂದು ಆರೋಪಿತನ ಮನೆಯ ಹತ್ತಿರ ಬಂದಿದ್ದನು ಎಂಬುದು ಸರಿ.

**ಪಾಟೀ ಸವಾಲಃ ಶ್ರಿ ಜೆ.ಸಿ.ಪಿ. ವಕೀಲರಿಂದ ಆರೋಪಿ ಪರವಾಗಿಃ**

**(ಕೂಗಿಸಲಾಯಿತು, ಗೈರು ಹಾಜರಿರುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯಾವು ವಿನೋದ್ ಕುಮಾರ v/s ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಪಾಟೀ ಸವಾಲನ್ನು ಮುಖ್ಯ ವಿಚಾರಣೆ ಮುಗಿದ ತಕ್ಷಣವೇ ಮಾಡಿ ಮುಗಿಸಬೇಕೆಂದು ಹೇಳಿರುವುದರಿಂದ, ಸಮಯಾವಕಾಶ ಕೊಡಲು**

CW-05
PW-04

**ಯಾವುದೇ ಸಕಾರಣ ಇರದೇ ಇರುವುದರಿಂದ ಅವರ ಮನವಿಯನ್ನು ನಿರಾಕಾರಿಸಿ ಪಾಟೀ ಸವಾಲನ್ನು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.